**NP – 002**

**ಮೊದಲ ಸೆಮಿಸ್ಟರ್ ಬಿ.ಎಸ್ಸಿ. ಪರೀಕ್ಷೆ, ಮೇ 2022**
**(NEP – 2021 – 22 and Onwards)**
**ಕನ್ನಡ ಭಾಷಾ ಪತ್ರ (Paper – I)**
**ವಿಜ್ಞಾನ ಕನ್ನಡ**

St Claret College Bengaluru LIBRARY

Time : 2½ Hours | Max. Marks : 60

I. ನಾಲ್ಕು ಪ್ರಶ್ನೆಗಳಿಗೆ ಉತ್ತರ ಬರೆಯಿರಿ (೮೦ ಪದಗಳಿಗೆ ಮೀರದಂತೆ) : **(4×5=20)**

1) ಪ್ರಾಚೀನ ಗ್ರೀಕ್ ಸಂಸ್ಕೃತಿಯ ಜೊತೆಗೆ ಕನ್ನಡ ಭಾಷೆ ಹೊಂದಿದ್ದ ಸಂಬಂಧವನ್ನು ವಿಶ್ಲೇಷಿಸಿ.
2) ಕುವೆಂಪು ಕನ್ನಡಿಗರಿಗೆ ಯಾವ ರೀತಿಯ ದೀಕ್ಷೆ ಕೊಡುತ್ತಾರೆ ?
3) ದುರ್ಯೋಧನನು ಈ ಭೂಮಿ ನನಗೆ ಪಾಳು ಭೂಮಿ ಎಂದುದು ಏಕೆ ?
4) ಕುರುಡು ನಂಬಿಕೆಗಳು ಹೇಗೆ ದುಷ್ಟ ಮನೋವೃತ್ತಿಯಾಗಿ ಬೆಳೆದಿವೆ ?
5) ವೈಜ್ಞಾನಿಕ ಮನೋಭಾವ ಮತ್ತು ವೈಜ್ಞಾನಿಕ ಮನೋವೃತ್ತಿಗೆ ಇರುವ ಸಂಬಂಧಗಳೇನು ?
6) ಸಾಹಿತ್ಯ ಮತ್ತು ವಿಜ್ಞಾನದ ನಡುವಿನ ಸಂಬಂಧ ಯಾವ ತರಹದ್ದು ?

II. ಎರಡು ಪ್ರಶ್ನೆಗಳಿಗೆ ಉತ್ತರ ಬರೆಯಿರಿ (೧೬೦ ಪದಗಳಿಗೆ ಮೀರದಂತೆ) : **(2×10=20)**

1) ಕನ್ನಡ ಸಂವರ್ಧನೆಗೆ ಅನುಸರಿಸಬೇಕಾದ ದಾರಿಗಳು ಯಾವುವು ? ವಿವರಿಸಿ.
2) ಪಾಹಾಂನ ಭೂಮಿಯ ಮೇಲಿನ ಮೋಹದ ವಿವಿಧ ಹಂತಗಳಾವುವು ? ವಿವರಿಸಿ.
3) ಜೈವಿಕ ವೈವಿಧ್ಯತೆಯು ಮನುಷ್ಯನ ಆರೋಗ್ಯ ರಕ್ಷಣೆಯಲ್ಲಿ ವಹಿಸುತ್ತಿರುವ ಪಾತ್ರವನ್ನು ಚರ್ಚಿಸಿ.

III. ಕೆಳಕಂಡ ಪಠ್ಯವನ್ನು **ಮೂರನೇ ಒಂದು** ಭಾಗಕ್ಕೆ ಸಂಕ್ಷೇಪಿಸಿ ಬರೆದು, ಸೂಕ್ತ ಶೀರ್ಷಿಕೆ ನೀಡಿ. **(1×3=3)**

ತರಗೆಲೆಗಳ ಮೇಲೆ ಒಂದು ಸುರುಳಿ ಸುತ್ತಿ ಬಿದ್ದಿದ್ದ ಎಲೆ ನನ್ನ ಗಮನ ಸೆಳೆಯಿತು. ಅಷ್ಟು ಎಲೆಗಳಲ್ಲಿ ಯಾಕೆ ಇದೊಂದೇ ಸುರುಳಿ ಸುತ್ತಿ ಬಿದ್ದಿದೆ ಎಂದು ಆಶ್ಚರ್ಯ ಆಯ್ತು. ಎಲೆ ಬೆಳೆಯುತ್ತಲೇ ಒಮ್ಮೊಮ್ಮೆ ಸುರುಳಿ ಸುತ್ತಿಕೊಂಡು ಇರುವಂತೆಯೂ ಇರಲಿಲ್ಲ. ಆ ಸುರುಳಿ ಬೇಕೆಂದೇ ಬಲವಾಗಿ ಬೀಡಿ ಸುರುಳಿ ಸುತ್ತಿದ್ದ ಹಾಗೆ ಇತ್ತು. ಸುರುಳಿ ಸುತ್ತಿ ಬಿದ್ದಿದ್ದ ಆ ಎಲೆ ತೆಗೆದುಕೊಂಡು ಪರೀಕ್ಷಿಸಿದೆ. ಎಲೆ ಸುರುಳಿ ಬಿಚ್ಚಿ ಹೋಗದ ಹಾಗೆ ಮೇಲೆ ಕೆಳಗೆ ಮಾತ್ರ ಮಡಚಿ ಪೊಟ್ಟಣ ಕಟ್ಟಿದ ಹಾಗೆ ಸಿಕ್ಕಿಸಲಾಗಿತ್ತು. ನಿಧಾನವಾಗಿ ಸುರುಳಿ ಬಿಚ್ಚಿದೆ. ಎಲೆಯ ಮೇಲಿನ ಸುರುಳಿ ಒಣಗಿದ್ದರೂ ಒಳಗೆಲ್ಲಾ ಹಸಿಯಾಗಿಯೇ ಇತ್ತು. ಒಳಗೆ ಏನಿರಬಹುದು ನೋಡೋಣವೆಂದು ಜೋಪಾನವಾಗೇ ಬಿಚ್ಚಿದೆ. ಸುರುಳಿ ಬಿಚ್ಚಿದ ಮೇಲೆ ಆ ಎಲೆಯ ಗಂಟು ತೊಟ್ಟಿಲ್ಲದ ಒಂದು ಇಡೀ ಎಲೆಯಾಯ್ತು. ನಾನು ಕುಳಿತಿದ್ದ ಅಬ್ಬಲು ಮರದ ಎಲೆಯೇ ಅದು. ಬಹುಶಃ ನನ್ನ ಹಾಗೇ ಯಾರೋ ಬೋರಾಗಿ ಈ ಮರದ ನೆರಳಿನಲ್ಲಿ ಕುಳಿತಿದ್ದವರು ಮಾಡಲು ಕೆಲಸವಿಲ್ಲದೆ ಈ ರೀತಿ ಎಲೆ ಸುತ್ತಿ ಬೀಡಾ ಮಾಡಿ ಎಸೆದು ಹೋಗಿದ್ದಾರೆ ಎಂದು ಊಹಿಸಿದೆ. ಕೈಯಲ್ಲಿದ್ದ ಖಾಲಿ ಎಲೆಯನ್ನು ಮಾಡುವುದೇನೆಂದು ಮುದುರಿ ಎಸೆದೆ. ಆದರೆ ಅದು ಬಿದ್ದ ಜಾಗದಲ್ಲೇ ನೋಡುತ್ತೇನೆ ! ಇನ್ನೆರಡು ಬೀಡಾಗಳು ಬಿದ್ದಿವೆ ! ಸರಿ. ಅವುಗೊಳಗಾದರೂ ಏನಾದರೂ ಇದೆಯಾ ನೋಡೋಣವೆಂದು ಬಿಚ್ಚಿದರೆ ಅವೂ ಖಾಲಿ ! ಸರಿ ಇದು ಯಾವನೋ ಹುಟ್ಟು ಸೋಮಾರಿಯ ಕೆಲಸವೇ ಎಂದು ಯೋಚಿಸಿ ಅವನ್ನು ಎಸೆದೆ.

IV. ಸಂಕ್ಷೇಪ ಮಾಡಿದ ಮೇಲಿನ ಬರಹವನ್ನು ಆಧರಿಸಿ ಎರಡು ಪ್ರಶ್ನೆಗಳನ್ನು ರೂಪಿಸಿ. **(2×1=2)**

P.T.O.

V. ಇವುಗಳಲ್ಲಿ **ಎರಡು** ಪದಗಳಿಗೆ ಸ್ವಂತ ವಾಕ್ಯ ರಚಿಸಿ. (2×1=2)

1) ಜನಪದ
2) ಹೀರೊಡಾಟಸ
3) ನಾದಾತೀತನು
4) ಸಮೃದ್ಧ ಬೆಳೆ.

VI. ನಿಮ್ಮ ವಿದ್ಯಾಭ್ಯಾಸದ ಪ್ರಗತಿಯ ಬಗೆಗೆ ಪೋಷಕರಿಗೆ ಪತ್ರ ಬರೆಯಿರಿ. (1×4=4)

VII. ಇವುಗಳಲ್ಲಿ **ನಾಲ್ಕು** ಪದಗಳಿಗೆ ಅರ್ಥ ಬರೆಯಿರಿ. (4×1=4)

1) ಆರಾಧಿಸು
2) ಬಾಳಲೋಚನ
3) ಸಿಂಧುಸುತ
4) ಮತಿ
5) ಆ್ಯಂಟಿಬಯೊಟಿಕ್ಸ್
6) ಪುರಾವೆ.

VIII. ಇವುಗಳಲ್ಲಿ **ಒಂದು** ಸರಿಯಾದ ಉತ್ತರವನ್ನು ಗುರುತಿಸಿ ಬರೆಯಿರಿ (**ಎಲ್ಲಾ ಐದು** ಪ್ರಶ್ನೆಗಳಿಗೆ ಉತ್ತರಿಸಿ). (5×1=5)

1) 'ಗಾಥಾ ಸತ್ತಸಯಿ' ಕೃತಿ ಬರೆದವರು
   A) ಭಾರವಿ B) ಹಾಲ C) ಹರ್ಷವರ್ಧನ D) ಶ್ರೀವಿಜಯ

2) ಅಂಧನೃಪತಿ ಯಾರು ?
   A) ಧೃತರಾಷ್ಟ್ರ B) ಭೀಷ್ಮ C) ಯುಧಿಷ್ಠಿರ D) ಶಂತನು

3) ಭಾರತವು ಸಾರ್ವಭೌಮ ರಾಷ್ಟ್ರವಾಗಿ ಹೊಮ್ಮಿದುದು
   A) 1947 B) 1949 C) 1950 D) 1955

4) 'ಹಿಸ್ಟರಿ ಆಫ್ ಟೈಮ್' ಎಂಬ ಪುಸ್ತಕ ಬರೆದವರು
   A) ಐನ್‌ಸ್ಟೈನ್ B) ಉಮರ್ ಖಯಾಮ್
   C) ಮೇರಿಕ್ಯೂರಿ D) ಸ್ಟೀಫನ್ ಹಾಕಿಂಗ್

5) ವಿಜ್ಞಾನಿಗಳು ಗುರುತಿಸಿರುವಂತೆ ಪ್ರಕೃತಿಯಲ್ಲಿ ನಮಗೆ ಆಹಾರವಾಗಬಲ್ಲಂತಹ ಸಸ್ಯಗಳ ಸಂಖ್ಯೆ
   A) 80,000 B) 60,000 C) 50,000 D) 30,000

---